**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10004/2024**

**ಚಾಸಾ ಃ 04**

**ಪ್ರಾಸಾ ಃ 11**

| | | |
|---|---|---|
| **ಹೆಸರು** | ಃ | ಮೂರ್ತಿ ಅಲಿಯಾಸ್ ಶ್ರೀನಿವಾಸಮೂರ್ತಿ |
| **ತಂದೆಯ ಹೆಸರು** | ಃ | ವೆಂಕಟರೆಡ್ಡಿ |
| **ವಯಸ್ಸು** | ಃ | 66 ವರ್ಷ |
| **ವೃತ್ತಿ** | ಃ | ಟೈಲರಿಂಗ |
| **ವಾಸ** | ಃ | ಶ್ರೀನಗರ, ರೈಲ್ವೇ ಸ್ಟೇಷನ್ ಹತ್ತಿರ, ದೊಡ್ಡಬಳ್ಳಾಪುರ. |

**ಈ ದಿನ ದಿನಾಂಕಃ 14.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಸದರಿ ಸಾಕ್ಷಿದಾರರಿಗೆ ಮರಿಯಾದಾಸ ಗೊತ್ತಾ ಎಂದು ಪ್ರಶ್ನಿಸಿದಾಗ ಸಾಕ್ಷಿದಾರರು ನಮ್ಮ ಮನೆಯ ಎದುರುಗಡೆ ಇರುವ ದಾಸ್ ರವರು ಗೊತ್ತಿರುತ್ತಾರೆ ಆದರೆ ಅವರ ಪೂರ್ತಿ ಹೆಸರು ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಅವರ ಹಂಡತಿಯೂ ಸಹ ಗೊತ್ತಿರುತ್ತೆರ ಆದರೆ ಅವರ ಹೆಸರು ಗೊತ್ತಿರುವುದಿಲ್ಲ. ಇಂದು ನ್ಯಾಯಾಲಯದಲ್ಲಿರುವ ಆರೋಪಿಯು ಗೊತ್ತಿರುತ್ತಾರೆ. ಆತನು ಶಾಮ್ ಇರುತ್ತಾರೆ. ಆತನು ಈಗ ನಾನು ಮೇಲೆ ಹೇಳಿದ ದಾಸ್ ಅವರ ಮಗನೀರುತ್ತಾನೆ. ಸದರಿ ಆರೋಪಿಯನ್ನು ನ್ಯಾಯಾಂಗ ಬಂಧನದಿಂದ ವಿ ಸಿ ಮೂಲಕ ಹಾಜರುಪಡಿಸಿದ್ದು ಸದರಿ ಸಾಕ್ಷಿದಾರರು ಆರೋಪಿಯನ್ನು ವಿ ಸಿ ಯಲ್ಲಿ ನೋಡಿ ಗುರುತಿಸಿರುತ್ತಾರೆ.

2. ಮೊದಲು ಅವರ ಮನೆಯಲ್ಲಿ ಅಪ್ಪ-ಅಮ್ಮ-ಮಗ 3 ಜನರಿದ್ದರು. ಮದುವೆಯಾದ ಮೇಲೆ ಸೊಸೆ ಬಂದಿರುತ್ತಾರೆ. ಅವರೆಲ್ಲೂರು ಒಟ್ಟಿಗೆ ಇದ್ದರು. ಕಳೆದ 2 ವರ್ಷಗಳ ಹಿಂದೆ ನಾವು ನಮ್ಮ ಮನೆಯಲ್ಲಿ ಮಲಗಿದ್ದಾಗ ಒಂದು ದಿನ ರಾತ್ರಿ 10-45 ಗಂಟೆಯಿಂದ 11-00 ಗಂಟೆಯ ಸಮಯದಲ್ಲಿ ಜೋರಾಗಿ ಮಾತನಾಡುವುದು ಮತ್ತು ಅಳುವುದು ಕೇಳಿಸಿತ್ತು. ಆಗ ನಾನು ಎದ್ದು ಮನೆಯಿಂದ ಆಚೆ ಹೊರೆಗೆ ಬಂದಿರುತ್ತೇನೆ. ಹೊರಗಡೆ ಬಂದಾಗ ದಾಸ್ ರವರ ಮನೆಯಿಂದ ಶಬ್ದ ಬರುತ್ತಿತ್ತು ಮತ್ತು ಅವರ ಮನೆಯ ಗೇಟ್ ಹಾಕಿತ್ತು. ಆಗ ನಾನು ನಮ್ಮ ಗೇಟ್ ತೆಗೆದು ಹೊರೆಗೆ ಬಂದಾಗ ಸೊಸೆಯನ್ನು ಶಾಮ್ ಮತ್ತು ಆತನ ತಂದೆ-ತಾಯಿ 3 ಜನರು ಕಾರಿನಲ್ಲಿ ಕೂರಿಸಿಕೊಂಡು ಕರೆದುಕೊಂಡು ಹೋಗಿರುತ್ತಾರೆ. ಮುಂದೆ ಏನಾಯಿತು ಎಂದು ಗೊತ್ತಿರುವುದಿಲ್ಲ. ನಂತರ ಬೆಂಗಳೂರು ರಸ್ತೆಯಲ್ಲಿನ ನವೋದಯ ಶಾಲೆಯ ಎದುರುಗಡೆ ಇರುವ ದೊಡ್ಡಬಳ್ಳಾಪುರದ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು ಗೊತ್ತಾಯಿತು.

3. ಮರುದಿನ ಬೆಳಗ್ಗೆ ಆ ಸೊಸೆ ತೀರಿಕೊಂಡಿರುತ್ತಳೆಂದು ಗೊತ್ತಾಯಿತು. ಮರ್ಡರ್ ಆಗಿ ತೀರಿಕೊಂಡಿರುತ್ತಾರೆಂದು ಗೊತ್ತಾಯಿತು. ಯಾರು ಮರ್ಡರ್ ಮಾಡಿರುತ್ತಾರೆಂದು ಗೊತ್ತಿರುವುದಿಲ್ಲ. ಕಾರಿನಲ್ಲಿ ಕರೆದುಕೊಂಡು ಹೋಗುವಾಗ ಅವರ ಮನೆಯ ಗೇಟಿನ ಮುಂಭಾಗದಲ್ಲಿ ನೆಲದ ಮೇಲೆ ಎಲ್ಲ ರಕ್ತ ಬಿದ್ದಿತು ಅದನ್ನು ನೋಡಿರುತ್ತೇನೆ. ಅಬೋರ್ಷನ್ ಆಗಿರಬಹುದೆಂದು ತಿಳಿದುಕೊಂಡಿರುತ್ತೇನೆ. ಪೊಲೀಸರು ಆ ಬಗ್ಗೆ ನನ್ನನ್ನು ವಿಚಾರಿಸಿರುತ್ತಾರೆ ಆಗ ಮೇಲೆ ಹೇಳಿದ ಎಲ್ಲಾ ವಿಚಾರವನ್ನು ತಿಳಿಸಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಆಲಿಸಿ ಪರಿಶೀಲಿಸಿ ಅನುಮತಿ ನೀಡಲಾಯಿತು. )**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

4. ನಾನು ನಮ್ಮ ಮನೆಯಿಂದ ಹೊರಗೆ ಬಂದ ನಂತರ ಮರಿಯದಾಸ್ ಮನೆಯ ಒಳಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯಿಂದ ಹೊರಗೆ ಬಂದ ನಂತರ ತಕ್ಷಣ ಮರಿಯದಾಸ್ ರವರ ಮನೆಯ ಒಳಗೆ ಹೋಗಿ ನೋಡಿದಾಗ ಅವರ ಸೊಸೆಯ ಮೈಮೇಲೆ ಗಂಭೀರ ಗಯಾಗಳಾಗಿದ್ದವು ಎಂದರೆ ನಾನು ನೋಡಿರುವುದಿಲ್ಲ. ಅಲ್ಲದೆ ಮರಿಯದಾಸ್ ಮತ್ತು ಆತನ ಹೆಂಡತಿ ಸೇಲಿನ್ ಮೆರಿ ಅವರಿಗೂ ಸಹ ಗಾಯಾಳಾಗಿದ್ದವು ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಬೇಡ್‌ರೂಂ ನ ಒಳಗೆ ನೋಡಿದಾಗ ಮಂಚದ ಮೇಲಿದ್ದ ಬೇಡ್ ಮತ್ತು ನೆಲದ ಮೇಲೆ ರಕ್ತ ಬಿದ್ದಿತು ಎಂದು ನಾನು ನೋಡಿರುವುದಿಲ್ಲ.

5. ಆ ಸಮಯದಲ್ಲಿ ನಮ್ಮ ಮನೆಯ ಪಕ್ಕದ ಮನೆಯಲ್ಲಿ ವಾಸವಾಗಿದ್ದ ರಮೇಶ ರವರೂ ಸಹ ಬಂದಿದ್ದರು ಎಂದರೆ ಸರಿಯಲ್ಲ. ಆಗ ನಾನು ರಮೇಶ ಹಾಗೂ ಇತರರು ಸೇರಿ ಜನೀಲಾ ಜೊಬಿಯನ್ನು ಕಾರಿನಲ್ಲಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಜನೀಲಾ ಜೊಬಿಯವರಿಗೆ ಕತ್ತು, ಹೊಟ್ಟೆ, ಬೆನ್ನಿಗೆ, ತೊಡೆಗೆ ಹಾಗೂ ಇತರ ಭಾಗಗಳಿಗೆ ರಕ್ತಗಾಯವಾಗಿತ್ತು ಎಂದರೆ ನೋಡಿರುವುದಿಲ್ಲ.

6. ನಂತರ ವಿಚಾರ ತಿಳಿಯಲಾಗಿ ಸದರಿ ಶ್ಯಾಮಮರಿಯದಾಸ್ ನು ಎನ್ ಜಿ ಒ ದಲ್ಲಿ ಕೆಲಸಮಾಡುತ್ತಿದ್ದಾಗ ತನ್ನ ಜೊತೆ ಕೆಲಸಮಾಡುತ್ತಿದ್ದ ಅಮೀದಾ ಎಂಬುವವರೊಂದಿಗೆ ಸಲುಗೆಯಿಂದ ಇದ್ದು ಆಕೆಯನ್ನು ಮದುವೆಯಾಗುತ್ತೇನೆಂದು ತನ್ನ ಮನೆಯಲ್ಲಿ ಹೇಳಿದ್ದು ಮನೆಯಲ್ಲಿ ತಂದೆ-ತಾಯಿಗಳು ಒಪ್ಪದೆ ಇದ್ದುದರಿಂದ ಮೃತೆಯೊಂದಿಗೆ ಮದುವೆ ಮಾಡಿದ್ದರು ಎಂದು ನಂತರದಲ್ಲೂ ಸಹ ಹಮಿದಾಳೊಂದಿಗೆ ಸಂಬಂಧವನ್ನು ಮುಂದುವರೆಸಿದ್ದರಿಂದ ಜನೀಲಾ

ರವರು ಬೇಜಾರು ಮಾಡಿಕೊಂಡು ತನ್ನ ಗಂಡನೊಂದಿಗೆ ಜಗಳ ಮಾಡಿಕೊಂಡಿದ್ದರು ಎಂಬ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

7. ನಂತರ ಶ್ಯಾಮಮರಿಯದಾಸ್ ನು ಹಮೀದರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು ಜನೀಲಾ ಜೊಬಿಯು ಬದುಕಿದ್ದರು ಹಮೀದಾಳೊಂದಿಗೆ ತಾನು ಇರಲು ಸಾಧ್ಯವಿಲ್ಲವೆಂದು ತಿಳಿದುಕೊಂಡು ಜನೀಲಾ ಜೊಬಿಯವರನ್ನು ಚಾಕೂವಿನಿಂದ ಆಕೆಯ ಹೊಟ್ಟೆ, ತೊಡೆ ಮತ್ತ ಕುತ್ತಿಗೆ ಹಾಗೂ ಮುಂತಾದ ಕಡೆಗಳಲ್ಲಿ ತಿವಿದು ಕೋಲೆಮಾಡಿರುತ್ತಾನೆಂದು ಮತ್ತು ಆ ಸಮಯದಲ್ಲಿ ಬಿಡಿಸಲು ಹೋದ ಆತನ ತಂದೆ-ತಾಯಿಗಳ ಮೇಲೂ ಸಹ ಅದೇ ಚಾಕೂವಿನಿಂದ ಹಲ್ಲೆ ಮಾಡಿರುತ್ತಾನೆಂದು ಈಗ ನನಗೆ ಓದಿ ಹೇಳಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯ ಅಂಶಗಳನ್ನು ನಿಪಿ-26 ಎಂದು ಗುರುತಿಸಲಾಯಿತು.

8. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ದಾಸ್ ರವರು ನಮ್ಮ ಮನೆಯ ಎದುರು ಮನೆಯವರು ಇರುತ್ತಾರೆಂದು ಮತ್ತು ಅವರ ಸೊಸೆ ಬೇರೆ ಊರಿನವಳು ಇರುತ್ತಾಳೆಂದು ಮತ್ತು ತೀರಿಕೊಂಡವಳು ತೀರಿಕೊಂಡಿರುತ್ತಾಳೆಂದು ಆದರೆ ಈಗ ಬದುಕಿದವರಿಗೆ ಏಕೆ ತೊಂದರೆ ಕೊಡಬೇಕೆಂದು ಆರೋಪಿಗೆ ಸಹಾಯ ಮಾಡಲು ಮತ್ತು ಶಿಕ್ಷೆಯಿಂದ ಪಾರು ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

**9.** ಹುಡುಗಿ ತೀರಿಕೊಳ್ಳುವ 10 ದಿನ ಮುಂಚೆ ಹುಡುಗಿಯ ತಾಯಿ ಮರಿಯದಾಸ್ ರವರ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ